ಮತ್ತು ಈಗಾಗಲೇ ಮುರಿದು ಕೊಂಡಿರುವ ಬಡ್ಡಿ ಹಣವನ್ನು ಮುಂದಿನ ಸಾಲ ಮರುಪಾವತಿ ಕಂತುಗಳಿಗೆ ಹೊಂದಿಸಿಕೊಳ್ಳುವ ಬಗ್ಗೆ ಪರಿಶೀಲಿಸುತ್ತಿದೆ.

ಚಿಕ್ಕನಾಯಕನಹಳ್ಳಿಗೆ ಕ್ರೀಡಾಂಗಣ ಮಂಜೂರಾತಿ.

ಶ್ರೀ ಜಿ.ಸಿ. ಮಧುಸ್ವಾಮಿ (ಚಿಕ್ಕನಾಯಕನಹಳ್ಳಿ): ಮಾನ್ಯ ಉಪಾಧ್ಯಕ್ಷರೆ, ಚಿಕ್ಕನಾಯಕನಹಳ್ಳಿಗೆ ಒಂದು ಕ್ರೀಡಾಂಗಣದ ಅಗತ್ಯವನ್ನು ಮನಗಂಡು ತುಮಕೂರು ಜಿಲ್ಲಾ ಪರಿಷತ್ ನವರು ನಿಲುವಳಿ ಪಾಸ್‌ಮಾಡಿ ಅಲ್ಲಿಗೆ ಒಂದು ಕ್ರೀಡಾಂಗಣ ಮಾಡಬೇಕೆಂದರೂ ಸರ್ಕಾರ ಮಾಡದಿರಲು ಕಾರಣವೇನು? ಹಾಗೂ ಈ ಬಗ್ಗೆ ನಿವೇಶನ ದೊರಕಿಸಿ ಕೊಟ್ಟಾಗ್ಯೂ ಹಾಗೂ ಸದರಿ ಕನ್ನಡ ಸಂಸ್ಕೃತಿ ಕ್ರೀಡಾ ಮಂತ್ರಿಗಳು ಕೂಡ ಸ್ಥಳ ನೋಡಿ ಬಂದು ವಾರದೊಳಗೆ ಈ ಬಗ್ಗೆ ಕಡತ ತಯಾರಿಸಲು ತಿಳಿಸಿದಾಗ್ಯೂ ಕೂಡ ಕಾರ್ಯ ಆರಂಭವಾಗದಿರಲು ಕಾರಣವೇನು? ಈ ಬಗ್ಗೆ ಸರ್ಕಾರದ ನಿಲುವೇನು? ಅಲ್ಲಿ ಒಂದು ಕ್ರೀಡಾಂಗಣ ಆರಂಭವಾಗುವುದೇ ಇಲ್ಲವೇ ಎಂಬ ಬಗ್ಗೆ ಸ್ಪಷ್ಟಪಡಿಸಿ ಆ ದಿಕ್ಕಿನಲ್ಲಿ ಆಗಿರುವ ಕೆಲಸದ ಬಗ್ಗೆ ತಿಳಿಸುವಿರಾ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಈವೊಂದು ವಿಷಯದ ಬಗ್ಗೆ ನಾಳೆ ಉತ್ತರ ಕೊಡಲು ಅವಕಾಶ ಮಾಡಿಕೊಡಿ.

ಉಪಾಧ್ಯಕ್ಷರು: ಆಗಬಹುದು. ಈಗ ಸದನದ ಕಲಾಪ ಮುಂದುವರೆದು ಪುನಃ ಮಧ್ಯಾಹ್ನ 3 ಗಂಟೆಗೆ ಸೇರುವುದು.

(ಸದನವು ಮಧ್ಯಾಹ್ನ 3 ಗಂಟೆ 45 ನಿಮಿಷಕ್ಕೆ ಪುನರಾರಂಭಗೊಂಡಿತು)

ಮಾನ್ಯ ಅಧ್ಯಕ್ಷರು (ಶ್ರೀ ವಿ.ಎಸ್. ಕೌಜಲಗಿಯವರು) ಪೀಠವನ್ನಲಂಕರಿಸಿದರು

ರಾಜ್ಯಪಾಲರ ಭಾಷಣದ ವಂದನಾರ್ಪಣ ಪ್ರಸ್ತಾವ

ಅಧ್ಯಕ್ಷರು: ರಾಜ್ಯಪಾಲರ ಭಾಷಣದ ವಂದನಾರ್ಪಣ ಪ್ರಸ್ತಾವದ ಮೇಲಿನ ಚರ್ಚೆಗೆ ಈಗ ನಮಗೆ ಸಿಗುವ ವೇಳೆ 900 ಮಿನಿಟುಗಳು. ಅದರಲ್ಲಿ ಆಳುವ ಪಕ್ಷಕ್ಕೆ 700, ವಿರೋಧಪಕ್ಷದವರಿಗೆ 200 ಮಿನಿಟುಗಳ ಟೈಂ ಕೊಡಲಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿರುವ ಹಾಗೆ ಗಂಭೀರವಾದ ಸಮಸ್ಯೆಗಳಿವೆ. ಐದು ದಿವಸ ಸತತವಾಗಿ ನಾವು ಚರ್ಚೆ ಮಾಡಬೇಕೆಂದು ಹೇಳಿದ್ದೇವೆ. ಆದರೆ ವಿರೋಧಪಕ್ಷಗಳಿಗೆ 200 ಮಿನಿಟು ಕೊಟ್ಟಿದ್ದೀರಿ. ಇದು ತದ್ವಿರುದ್ಧ ಇರಬೇಕಾಗಿತ್ತು.

ಶ್ರೀ ಶಿವಾನಂದ ಹೆಚ್. ಕೌಜಲಗಿ: ಈ ಕಡೆ ಇಬ್ಬರು ಮಾತನಾಡಿದರೆ ಆ ಕಡೆ ಒಬ್ಬರು ಮಾತನಾಡಬೇಕು, ಹಾಗೆ ಪದ್ಧತಿ ಇದೆ. ಆ ಪ್ರಿಸಿಡೆಂಟನ್ನು ಮುರಿಯುವುದಕ್ಕೆ ಹೋಗಬೇಡಿ.

ಅಧ್ಯಕ್ಷರು: ಕೇಳಿ ಸ್ವಾಮಿ, ಇರುವ ಸದಸ್ಯರಿಗೆ ಸರಿಯಾದ ಟೈಂ ಅನ್ನು ಅಲಾಟ್ ಮಾಡಿದ ಆಧಾರದ ಮೇಲೆ ಹೇಳಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ನಾವು ಸ್ಪಷ್ಟವಾಗಿ ಚರ್ಚೆ ಮಾಡಿದ್ದೇವೆ. ಎಷ್ಟು ಸಮಯ ನಮಗೆ ಬೇಕಾಗುತ್ತದೆ ಎಂಬುದನ್ನು ತಮ್ಮ ಗಮನಕ್ಕೆ ತರುವ ಪ್ರಯತ್ನ ಮಾಡಿದ್ದೇವೆ. ಇತಿಹಾಸದಲ್ಲಿ 700 ನಿಮಿಷ ಆಡಳಿತ ಪಕ್ಷಕ್ಕೆ ಕೊಟ್ಟು 200 ನಿಮಿಷ ವಿರೋಧ ಪಕ್ಷಕ್ಕೆ ಕೊಟ್ಟಿರುವ ಯಾವುದೇ ದಾಖಲೆ ಇದೆಯೇ ಎಂದು ತೆಗೆದುನೋಡಿ. ಕಳೆದ ನಾಲ್ಕು ತಿಂಗಳಿಂದ ಅಧಿವೇಶನ ನಡೆದಿಲ್ಲ. ಸಾವಿರಾರು ಜನರ ಸಮಸ್ಯೆಗಳ ಬಗ್ಗೆ ಸರ್ಕಾರದ ಗಮನ ಸಳೆಯುವುದಕ್ಕಾಗಿಲ್ಲ.